Akashvani : Bangalore
National Bulletins In Kannada
13.09.2025 : 7.35 PM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**ಮುಖ್ಯಾಂಶಗಳು**

೧. ಮಣಿಪುರದ ಭವ್ಯ ಭವಿತವ್ಯಕ್ಕಾಗಿ ಶಾಂತಿಪಥದಲ್ಲಿ ಮುನ್ನಡೆಯಲು ಸಂಘಟನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ

೨. ಶಾಸನಸಭೆಗಳು ಸಾರ್ವಜನಿಕ ಹಿತಚಿಂತನೆಯ ವೇದಿಕೆಗಳಾಗಿ ಉಳಿಯಲಿ - ಲೋಕಸಭಾಧ್ಯಕ್ಷ ಓಂ ಬಿರ್ಲಾ ಆಶಯ

೩. ಭಾರತದಲ್ಲಿ ೨೦೨೮ರ ಕರಾವಳಿ ಕಾವಲು ಜಾಗತಿಕ ಶೃಂಗಸಭೆ ಆಯೋಜನೆ

೪. ಹಾಂಕಾಂಗ್ ಓಪನ್ ಬ್ಯಾಡ್ಮಿಂಟನ್; ಭಾರತದ ಲಕ್ಷ್ಯಸೇನ್ ಹಾಗೂ ಸಾತ್ವಿಕ್ ಸಾಯಿರಾಜ್ - ಚಿರಾಗ್ ಶೆಟ್ಟಿ ಜೋಡಿ ಫೈನಲ್ ಗೆ

*><><*><><*

ಮಕ್ಕಳ ಭವಿಷ್ಯ ಹಾಗೂ ಕನಸುಗಳನ್ನು ಸಾಕಾರಗೊಳಿಸಲು ಮಣಿಪುರದ ಎಲ್ಲಾ ಸಂಘಟನೆಗಳು ಶಾಂತಿಪಥದಲ್ಲಿ ಮನ್ನಡೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಭಾರತ ಸರ್ಕಾರ ಮಣಿಪುರದ ಜನತೆಯೊಂದಿಗೆ ಭದ್ರ ಬೆಂಬಲವಾಗಿ ನಿಂತಿದೆ ಎಂದು ಅವರು ಪುನರುಚ್ಚರಿಸಿದ್ದಾರೆ. ಅವರು, ಮಣಿಪುರದ ಚುರಚಾಂಧಾಪುರದಲ್ಲಿ ಇಂದು ೭ ಸಾವಿರದ ೩೦೦ ಕೋಟಿ ರೂಪಾಯಿಗೂ ಅಧಿಕ ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.ಮಣಿಪುರದ ಗುಡ್ಡಗಾಡು ಕಣಿವೆ ಪ್ರದೇಶಗಳ ವಿವಿಧ ಗುಂಪುಗಳೊಡನೆ ಒಪ್ಪಂದಕ್ಕಾಗಿ ಮಾತುಕತೆಗಳು ನಡೆದಿವೆ. ಇದು ಮಾತುಕತೆ, ಪರಸ್ಪರ ಗೌರವ ಮತ್ತು ತಿಳಿವಳಿಕೆಗಳ ಆದ್ಯತೆ ನೀಡಿ ಶಾಂತಿ ಸ್ಥಾಪಿಸುವ ಸ್ಥೂಲ ಕ್ರಮದ ಭಾಗವಾಗಿದೆ ಎಂದು ಪ್ರಧಾನಿ ಹೇಳಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ ( ೨೧ ಸೆಕೆಂಡುಗಳು)**

ಇಂದು, ಅನಾವರಣಗೊಳಿಸಲಾದ ಯೋಜನೆಗಳಿಂದ ಮಣಿಪುರದಲ್ಲಿ ಮೂಲಭೂತ ಸೌಕರ್ಯ ಆರೋಗ್ಯ ಸೇವೆ ಉತ್ತಮಗೊಂಡು ಜನಜೀವನ ಸುಧಾರಿಸಲಿದೆ ಎಂದು ಪ್ರಧಾನ ಮಂತ್ರಿ

ಹೇಳಿದರು.೨೦೧೪ರಿಂದಲೂ ಸರ್ಕಾರ ಈ ಭಾಗದ ಸಂಪರ್ಕ ಉತ್ತಮಗೊಳಿಸಲು ಆದ್ಯತೆ ನೀಡಿದೆ. ರೈಲು ಮತ್ತು ರಸ್ತೆ ಮೂಲ ಸೌಕರ್ಯದ ಬಜೆಟ್ ಹೆಚ್ಚಿಸಿದೆ. ಇದಲ್ಲದೆ ಹಳ್ಳಿಗಳಿಗೆ ರಸ್ತೆ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು. ಕಳೆದ ಕೆಲ ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿಗಳಿಗಾಗಿ ೩ ಸಾವಿರದ ೭೦೦ ಕೋಟಿ ರೂಪಾಯಿ ವೆಚ್ಚಮಾಡಿದೆ ಎಂದು ತಿಳಿಸಿದ ಪ್ರಧಾನಿ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಲು ಭಾರತ ಸರ್ಕಾರ ಪ್ರಯತ್ನಿಸುತ್ತಿದೆ ಎಂದರು.

ಮಣಿಪುರದ ಜನತೆಯ ಧೈರ್ಯ, ಸುಸ್ಥಿರತೆ ಹಾಗೂ ಸ್ಫೂರ್ತಿಯನ್ನು ಪ್ರಶಂಸಿಸಿದ ಪ್ರಧಾನಿ ನರೇಂದ್ರ ಮೋದಿ ಭಾರೀ ಮಳೆಯ ಹೊರತಾಗಿಯೂ ಅಪಾರ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಜನರನ್ನು ಅಭಿನಂದಿಸಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ ( ೪೯ ಸೆಕೆಂಡುಗಳು)**

ಪ್ರಧಾನಿ ಅವರು, ಶಂಕು ಸ್ಥಾಪನೆ ನೆರವೇರಿಸಿದ ೧೪ ಯೋಜನೆಗಳಲ್ಲಿ ಮಣಿಪುರದ ನಗರ ರಸ್ತೆ, ಒಳಚರಂಡಿ, ನಿರ್ವಹಣೆ, ಐದು ರಾಷ್ಟ್ರೀಯ ಹೆದ್ದಾರಿ ಯೋಜನೆ , ಮಣಿಪುರ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಯೋಜನೆ, ಕಾರ್ಯ ನಿರತ ಮಹಿಳರಯರಿಗಾಗಿ ೯ ತಾಣಗಳಲ್ಲಿ ವಸತಿ ಗೃಹ ನಿರ್ಮಾಣ ಸೇರಿದೆ.

*><><*><><*

ಶಾಸನಸಭೆಗಳು ಸಾರ್ವಜನಿಕ ಹಿತದ ಗುರಿಯಾಗಿ ಮುಖ್ಯ ವಿಷಯಗಳ ಕುರಿತು ಚರ್ಚೆ, ವಾದ ಮತ್ತು ಚಿಂತನೆ ನಡೆಸುವ ವೇದಿಕೆಗಳಾಗಿ ಉಳಿಯಲಿ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಅವರು ಬೆಂಗಳೂರಿನಲ್ಲಿ ಇಂದು ಕಾಮನ್‌ವೆಲ್ತ್ ಸಂಸದೀಯ ಸಂಘದ ೧೧ನೇ ಭಾರತ ಪ್ರಾದೇಶಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಶಾಸನ ಸಭೆಗಳು ಸಾಮಾಜಿಕ ಹಾಗೂ ರಾಷ್ಟ್ರೀಯ ಹಿತಕ್ಕಾಗಿ ಮಾಹಿತಿ ಆಧರಿತ ಹಾಗೂ ಫಲಕಾರಿ ನಿರ್ಣಯಗಳನ್ನು ತೆಗೆದುಕೊಳ್ಳುವ ಸ್ಥಳಗಳಾಗಬೇಕು. ಶಾಸನಸಭೆಗಳು ಗೊಂದಲ ಮತ್ತು ಅಶಿಸ್ತಿನ ಅಖಾಡವಲ್ಲ ಎಂದು ಹೇಳಿದರು. ಸಮ್ಮೇಳನದಲ್ಲಿ ಉತ್ತಮ ಸಂಸದೀಯ ಅಭ್ಯಾಸಗಳು ಮತ್ತು ಪ್ರಕ್ರಿಯೆಗಳ ಕುರಿತು ಚರ್ಚೆಯಾಗಿದೆ. ಈ ಗುರಿ ಸಾಧಿಸಲು ರಾಜಕೀಯ ಪಕ್ಷಗಳು ಹಾಗೂ ಶಾಸಕರನ್ನು ನಂಬಿಕೆಗೆ ತೆಗೆದುಕೊಳ್ಳಬೇಕು. ಶಾಸಕರು ಜವಾಬ್ದಾರಿಯುತವಾಗಬೇಕು, ಪಾರದರ್ಶಕತೆ ಹೆಚ್ಚಳವಾಗಬೇಕು ಮತ್ತು ಶಾಸನಸಭೆಯಲ್ಲಿ ನಡೆಯುವ ವ್ಯವಹಾರಗಳು ಹಾಗೂ ನಿರ್ಧಾರಗಳ ಮಾಹಿತಿ ಜನತೆಗೆ ತಲುಪಬೇಕು ಎಂದು ಅವರು ಹೇಳಿದರು. ಮಾಧ್ಯಮಗಳು

ಶಾಸಕರ ಸಕಾರಾತ್ಮಕ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಜನರಿಗೆ ತಲುಪಿಸಲು ಸಹಕರಿಸಬೇಕೆಂದು ಮನವಿ ಮಾಡಿದ ಅವರು, ೨೦೪೭ರೊಳಗೆ "ವಿಕಸಿತ ಭಾರತ"ದ ಕನಸು ನನಸಾಗಿಸಲು ಶಾಸನ ಸಭೆಗಳು ಈ ದಿಕ್ಕಿನಲ್ಲಿ ಕೆಲಸ ಮಾಡಲಿ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು. ಸಮಾರೋಪ ಸಮಾರಂಭದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಲೋಕಸಭಾಧ್ಯಕ್ಷ ಓಂಬಿರ್ಲಾ, ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳಲ್ಲಿ ನಡೆಯುವ ಚರ್ಚೆಗಳು, ಮಂಡನೆಯಾಗುವ ಮತ್ತು ಅಂಗೀಕೃತಗೊಳ್ಳುವ ವಿಧೇಯಕಗಳ ಬಗ್ಗೆ ಒಂದೇ ಡಿಜಿಟಲ್ ವೇದಿಕೆಯಲ್ಲಿ ಮಾಹಿತಿ ಒದಗಿಸುವ ವ್ಯವಸ್ಥೆ ಮಾಡಲಾಗುವುದು ಎಂದರು.

**ಧ್ವನಿ : ಓಂ ಬಿರ್ಲಾ, ಲೋಕಸಭಾಧ್ಯಕ್ಷ ( ೩೪ ಸೆಕೆಂಡುಗಳು)**

ಮಸೂದೆಗಳ ರಚನೆಯ ಬಗ್ಗೆ ಆಯಾ ಕ್ಷೇತ್ರದ ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ಸೂಕ್ತ ಮತ್ತು ಉತ್ತಮ ಮಸೂದೆಗಳ ಮಂಡನೆಗೆ ವ್ಯವಸ್ಥೆ ರೂಪಿಸುವ ಕುರಿತಂತೆ ಲೋಕಸಭಾಧ್ಯಕ್ಷರು ತಿಳಿಸಿದರು.

*><><*><><*

ಕ್ರಾಂತಿಕಾರಿ ಹುತಾತ್ಮ ಜತೀಂದ್ರನಾಥ್ ದಾಸ್ ಪುಣ್ಯ ಸ್ಮರಣೆ ಸಂದರ್ಭದಲ್ಲಿ ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಜತೀಂದ್ರನಾಥ್ ದಾಸ್ ಮಾಡಿದ ತ್ಯಾಗ ಬಲಿದಾನ ಸ್ಮರಿಸಿರುವ ಅಮಿತ್ ಶಾ, ಅವರ ಜೀವನ ಯುವಜನತೆಗೆ ಸ್ಫೂರ್ತಿಯಾಗಿದೆ ಎಮದು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

*><><*><><*

ವಿಶ್ವ ಮಟ್ಟದ ಐದನೇ ಕರಾವಳಿ ಕಾವಲು ಜಾಗತಿಕ ಶೃಂಗಸಭೆ ೨೦೨೭ರಲ್ಲಿ ಭಾರತದಲ್ಲಿ ನಡೆಯಲಿದೆ. ಇಟಲಿಯ ರೋಮ್ ನಲ್ಲಿ ನಡೆದ ೪ನೇ ಕರಾವಳಿ ಕಾವಲು ಜಾಗತಿಕ ಶೃಂಗಸಭೆಯಲ್ಲಿ ಈ ಕುರಿತ ಬಿಡ್ ನಲ್ಲಿ ಭಾರತ ಗೆದ್ದಿದೆ ಎಂದು ಘೋಷಣೆ ಮಾಡಲಾಗಿದೆ. ಇದು ಸಾಗರ ವಹಿವಾಟುಗಳಲ್ಲಿ ಭಾರತದ ಬೆಳೆಯುತ್ತಿರುವ ನಾಯಕತ್ವವನ್ನು ತೋರಿಸುತ್ತಿದ್ದು, ಗಮನಾರ್ಹ ಮೈಲುಗಲ್ಲಾಗಿದೆ ಎಂದು ಭಾರತೀಯ ಕಾವಲು ಪಡೆ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ. ಜಾಗತಿಕ ಕರಾವಳಿ ಕಾವಲು ಸಹಕಾರ ಕುರಿತಾಗ ಈ ಶೃಂಗಸಭೆಯಲ್ಲಿ ೧೧೫ ದೇಶಗಳ ಸಂಘಟನೆಗಳು ಪಾಲ್ಗೊಂಡಿದ್ದವೆಂದು ಭಾರತೀಯ ಕರಾವಳಿ ಪಡೆಯ ಮಹಾನಿರ್ದೇಶಕ ಪರಮೇಶ್ ಶಿವಮಣಿ ತಿಳಿಸಿದ್ದಾರೆ. ೨೦೨೭ರ ಐದನೇ ಕರಾವಳಿ ಕಾವಲು ಜಾಗತಿಕ ಶೃಂಗಸಭೆ,

ಚೆನ್ನೈನಲ್ಲಿ ಭಾರತದ ಕರಾವಳಿ ಕಾವಲು ಪಡೆಯ ಸ್ವರ್ಣ ಜಯಂತಿ ಸಂದರ್ಭದಲ್ಲೇ ನಡೆಯಲಿರುವುದು ವಿಶೇಷವೆನಿಸಿದೆ.

*><><*><><*

ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ವಿಕಸಿತ್ ಭಾರತ್ ಯಂಗ್ ಡೈಲಾಗ್ ಲೀಡರ್ ಕಾರ್ಯಕ್ರಮ ಯುವಜನ ನೇತೃತ್ವದ ಪ್ರಜಾತಂತ್ರ ಉಪಕ್ರಮದ ಉದಾಹರಣೆಯಾಗಿದೆ ಎಂದು ಯುವಜನ ವ್ಯವಹಾರ ಹಾಗೂ ಕ್ರೀಡಾಖಾತೆ ಸಚಿವ ಡಾ.ಮನ್ಸೂಖ್ ಮಾಂಡವೀಯ ಹೇಳಿದ್ದಾರೆ. ಅವರು ನವದೆಹಲಿಯಲ್ಲಿ ಇಂದು ವಿಕಸಿತ್ ಭಾರತ್ ಯಂಗ್ ಡೈಲಾಗ್ ಲೀಡರ್ ೨೦೨೬ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಈ ಉಪಕ್ರಮ ಯುವಜನತೆಯ ದೃಷ್ಟಿಯನ್ನು ದನಿಯಾಗಿ ಹಾಗೂ ದನಿಯನ್ನು ಸಾಕಾರವಾಗಿ ಪರಿವರ್ತಿಸುತ್ತಿದೆ ಎಂದರು. ಇಂದಿನಿಂದ ಆರಂಭವಾದ ರಸಪ್ರಶ್ನೆ ಸ್ಪರ್ಧೆ ಮುಂದಿನ ತಿಂಗಳ ೧೫ರಂದು ಮುಕ್ತಾಯಗೊಳ್ಳಲಿದೆ. ಈ ರಸಪ್ರಶ್ನೆ ಮೈ ಭಾರತ್ ಪೋರ್ಟಲ್ ನಲ್ಲಿ ಕೂಡ ಲಭ್ಯವಿರುತ್ತದೆ ಎಂದು ಸಚಿವ ಡಾ. ಮನ್ಸೂಖ್ ಮಾಂಡವೀಯ ಹೇಳಿದ್ದಾರೆ.

*><><*><><*

ಭಾರತದ ಲಕ್ಷ್ಯಸೇನ್ ಹಾಂಕಾಂಗ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಫೈನಲ್ಸ್ ಪ್ರವೇಶಿಸಿದ್ದಾರೆ. ಇಂದು ನಡೆದ ಪುರುಷರ ಸಿಂಗಲ್ಸ್ ಸೆಮಿ ಫೈನಲ್ಸ್ ಪಂದ್ಯದಲ್ಲಿ ಲಕ್ಷ್ಯಸೇನ್ ಥೈವಾನಿನ ಚೌ ಟೇನ್ ಚೆನ್ ಅವರನ್ನು ೨೩-೨೧, ೨೨-೨೦ ಅಂತರದಿಂದ ಪರಾಭವಗೊಳಿಸಿದರು. ಅಂತಿಮ ಪಂದ್ಯದಲ್ಲಿ ಲಕ್ಷ್ಯಸೇನ್ ಚೀನಾದ ಲಿ ಶಿಫೆಂಗ್ ಅವರನ್ನು ಎದುರಿಸಲಿದ್ದಾರೆ. ಪುರುಷರ ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡಿ ಚಿರಾಗ್ ಶೆಟ್ಟಿ ಜೋಡಿ, ಚೀನಾಥೈಪೈ ನ ಬಿಂಗ್ ವಿ ಲಿನ್ ಮತ್ತು ಚೆನ್ ಚಂಗ್ ಕೌನ್ ಜೋಡಿಯನ್ನು ೨೧-೧೭, ೨೧-೧೫ ಅಂತರದಲ್ಲಿ ಪರಾಭವಗೊಳಿಸಿದರು. ಭಾರತದ ಈ ಜೋಡಿ ನಾಳೆ ನಡೆಯಲಿರುವ ಅಂತಿಮ ಪಂದ್ಯದಲ್ಲಿ ಚೀನಾ ತಂಡವನ್ನು ಎದುರಿಸಲಿದ್ದಾರೆ.

*><><*><><*

ದುಬೈನ ಶೇಖ್ ಝೂಯೇದ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಏಷ್ಯಾ ಕಪ್ ಕ್ರಿಕೆಟ್ ಬಿ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ ಮತ್ತು ಶ್ರೀಲಂಕಾ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ  ಆರಂಭವಾಗಲಿದೆ

*><><*><><*

ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವಿನ ಏಷ್ಯಾ ಕಪ್ ಟಿ-೨೦ ಕ್ರಿಕೆಟ್ ಪಂದ್ಯ ನಾಳೆ ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಎ ಗುಂಪಿನಲ್ಲಿರುವ ಭಾರತ ತಂಡ, ತನ್ನ ಆರಂಭಿಕ ಪಂದ್ಯದಲ್ಲಿ ಆತಿಥೇಯ ಯುಎಇ ತಂಡವನ್ನು ಮಣಿಸಿ ಭರ್ಜರಿ ಆರಂಭ ಮಾಡಿದೆ. ಹಾಗೆಯೇ ಪಾಕಿಸ್ತಾನ ತಂಡ ತನ್ನ ಆರಂಭಿಕ ಪಂದ್ಯದಲ್ಲಿ ಒಮನ್ ತಂಡವನ್ನು ಸೋಲಿಸಿ ಭಾರತದ ಸವಾಲಿಗೆ ಸಜ್ಜಾಗಿದೆ. ಪಂದ್ಯ ಭಾರತೀಯ ಕಾಲಮಾನ ನಾಳೆ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

*><><*><><*